**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 17-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 2427/2024
PW-1

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1) ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ. ನಾನು ಕೃಷಿಕನಾಗಿರುತ್ತೇನೆ. ನನಗೆ ಇಬ್ಬರು ಮಕ್ಕಳಿರುತ್ತಾರೆ, ಅವರು ಶಾಲೆ ಕಲಿಯುತ್ತಿದ್ದಾರೆ. ನನಗೆ ಸೇರಿದ ಜಮೀನುಗಳು ಇರುವುದಿಲ್ಲ, ನಾನು ಬೇರೆಯವರ ಜಮೀನನ್ನು ಗುತ್ತಿಗೆ ಆಧಾರದ ಮೇಲಿಂದ ಪಡೆದುಕೊಂಡು ಒಕ್ಕಲುತನ ಮಾಡುತ್ತೇನೆ. ಹಾಗೆ ಗುತ್ತಿಗೆ ಆಧಾರದ ಮೇಲೆ ತುಕ್ಕಾನಟ್ಟಿ ಏರಿಯಾದಲ್ಲಿ ಬರುವ ರಾಜಪ್ಪಾ ಮುಂಡಿಗನಾಳರವರ 3 ಎಕರೆ ಜಮೀನನ್ನು ಮಾಡುತ್ತಿದ್ದೇನೆ. ಅದರಂತೆ ಗೋರಶಿರವರ 2 ಎಕರೆ ಜಮೀನು ಹಾಗೂ ಅಪ್ಪಯ್ಯಾ ದವಲಟ್ಟಿರವರ 1 ಎಕರೆ 20 ಗುಂಟೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಮಾಡುತ್ತಿದ್ದೇನೆ, ಹಾಗೆ ಗುತ್ತಿಗೆ ಆಧಾರದ ಮೇಲೆ ಜಮೀನುಗಳನ್ನು ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

2) ಕಲ್ಲೋಳಿ ಗ್ರಾಮದಲ್ಲಿ ತಮ್ಮಣ್ಣಗೌಡಾ ಪಾಟೀಲರವರ 20 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಅವರು 4-5 ಜನರಿಗೆ ಗುತ್ತಿಗೆ ಆಧಾರದ ಮೇಲಿಂದ ಮಾಡಲು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ನಾನು

ಸದರಿ ತಮ್ಮಣ್ಣಗೌಡಾ ಪಾಟೀಲರವರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಮಾಡಿದ್ದೇವು ಎಂದರೆ ಸರಿಯಲ್ಲ.

3) ಆರೋಪಿ ಕಳೆದ 8-10 ವರ್ಷಗಳಿಂದ ನನ್ನ ಸ್ನೇಹಿತನಾಗಿರುತ್ತಾನೆ. ಸದರಿ ಸಂಗತಿಯನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮನೆಗೆ ನಾನು ಯಾವತ್ತೂ ಹೋಗಿ ಬಂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಗುತ್ತಿಗೆ ಆಧಾರದ ಮೇಲಿಂದ ರಾಜಪ್ಪಾ ಭೀಮಪ್ಪಾ ಮುಂಡಿಗನಾಳರವರ ಜಮೀನು ಮಾಡಿದ್ದು ಅದರ ಪಕ್ಕದಲ್ಲಿ ಆರೋಪಿಯು ಸಹ ಜಮೀನನ್ನು ಗುತ್ತಿಗೆ ಆಧಾರದ ಮೇಲಿಂದ ಮಾಡುತ್ತಿದ್ದುದರಿಂದ ಆರೋಪಿಯ ಪರಿಚಯವಾಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ಯಾರ ಜಮೀನನ್ನು ಗುತ್ತಿಗೆ ಆಧಾರದ ಮೇಲಿಂದ ಮಾಡಿದ್ದಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ತುಕ್ಕಾನಟ್ಟಿ ಗ್ರಾಮದ ಜಮೀನುಗಳನ್ನು ಮಾಡುತ್ತಿದ್ದಾ ಎಂದು ನುಡಿಯುತ್ತಾರೆ.

4) ಆರೋಪಿ ನನ್ನಿಂದ 2-3 ಸಲ ಸ್ವಲ್ಪ ಸ್ವಲ್ಪ ಹಣ ಪಡೆಯುವುದು ಮತ್ತು ಮರಳಿ ಕೊಡುವುದು ಮಾಡುತ್ತಿರುವುದರಿಂದ ಆರೋಪಿಯ ಮೇಲೆ ನಂಬಿಕೆ ಉಂಟಾಗಿರುತ್ತದೆ. ಹಾಗೆ ಆರೋಪಿಗೆ 2-3 ಸಲ ಯಾವ ಯಾವ ದಿನಾಂಕದಂದು ಹಣ ನೀಡಿರುತ್ತೇನೆ ಎಂಬುವುದು ಮತ್ತು ಆರೋಪಿ ನನಗೆ ಮರಳಿ ಯಾವ ಯಾವ ದಿನಾಂಕದಂದು ಹಣ ನೀಡಿರುತ್ತಾನೆ ಎಂಬುವುದು ನನಗೆ ಈಗ ನೆನಪಿಲ್ಲ. ಆರೋಪಿ

ನನ್ನಿಂದ 2-3 ಸಲ ರೂ. 10 ರಿಂದ 20 ಸಾವಿರವರೆಗೆ ನನ್ನ ಮನೆಗೆ ಬಂದು ಹಣ ಪಡೆದುಕೊಂಡು ಮರಳಿ ನೀಡಿರುತ್ತಾನೆ. ಸದರಿ ಸಂಗತಿಯನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸ್ನೇಹಿತನಾಗಿರುವುದಿಲ್ಲ ಎಂದರೆ ಸರಿಯಲ್ಲ.

5) ನಾನು ಗುತ್ತಿಗೆ ಆಧಾರದ ಮೇಲಿಂದ ಮೂರು ಜನರ ಜಮೀನುಗಳನ್ನು ಮಾಡುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಈ ಹಿಂದೆ ತಮ್ಮಣ್ಣಗೌಡಾ ಪಾಟೀಲರವರ 2 ಎಕರೆ ಜಮೀನು ಗುತ್ತಿಗೆ ಆಧಾರದ ಮೇಲೆ ಮಾಡಿರುವ ಜಮೀನನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

6) ಆರೋಪಿ ಯಾವ ದಿನಾಂಕದಂದು ನಿಮಗೆ ಹಣ ಕೇಳಲು ಬಂದಿದ್ದಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2023 ರ ಎಪ್ರೀಲ್ ತಿಂಗಳ ಮೊದಲನೆ ವಾರದಲ್ಲಿ ಬಂದಿದ್ದಾ ಎಂದು ನುಡಿಯುತ್ತಾರೆ. ಹಾಗೆ ಹಣ ಕೇಳಲು ಆರೋಪಿ ಮಾತ್ರ ಬಂದಿದ್ದಾ ಬೇರೆ ಯಾರು ಆರೋಪಿಯ ಜೊತೆಗೆ ಬಂದಿರಲಿಲ್ಲಾ, ಆರೋಪಿಗೆ ನಾನು ಎಪ್ರೀಲ್ 2023 ರ ಮೊದಲನೆ ವಾರದಲ್ಲಿ ರೂ. 3,00,000/- ಹಾಗೂ ಅದೇ ತಿಂಗಳ ಮೂರನೇ ವಾರದಲ್ಲಿ ರೂ. 1,00,000/- ಹಣ ನೀಡಿರುತ್ತೇನೆ ಎಂದು ತೋರಿಸಲು ಈ ಪ್ರಕರಣದಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲಾ ಎಂದರೆ ಸರಿ. ಆರೋಪಿ ನನ್ನಿಂದ ಯಾವುದೇ ಸಾಲ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ, ಅದರ ಮರುಪಾವತಿ

ಮಾಡಲು 6 ತಿಂಗಳ ಸಮಯಾವಕಾಶ ಕೇಳಿದ್ದಾ ಎಂದು ದೂರಿನಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

7) ಆರೋಪಿ ಕಲ್ಲೋಳಿ ಗ್ರಾಮದ ತಮ್ಮಣ್ಣಗೌಡಾ ಪಾಟೀಲ ರವರ ಜಮೀನು ಗುತ್ತಿಗೆ ಆಧಾರದ ಮೇಲೆ ಮಾಡುವ ಸಮಯದಲ್ಲಿ ಸದರಿ ತಮ್ಮಣ್ಣಗೌಡಾ ರವರು ಆರೋಪಿಯ ಈ ಪ್ರಕರಣದ ಖಾಲಿ ಚೆಕ್ಕನ್ನು ಭದ್ರತೆಗಾಗಿ ಆರೋಪಿಯ ಕಡೆಯಿಂದ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ತಮ್ಮಣ್ಣಗೌಡಾ ಪಾಟೀಲರವರೊಂದಿಗೆ ನಾನು ಅನ್ಯೋನ್ಯವಾಗಿ ಇರುವ ಕಾರಣ ತಮ್ಮಣ್ಣಗೌಡಾ ಪಾಟೀಲ ರವರು ಆರೋಪಿಯ ಈ ಪ್ರಕರಣದ ಚೆಕ್ಕನ್ನು ನನಗೆ ನೀಡಿ ನನ್ನಿಂದ ಇದೊಂದು ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

8) ಆರೋಪಿಯ ಮನೆ ತುಕ್ಕಾನಟ್ಟಿ ಗ್ರಾಮದಲ್ಲಿ ಇರುತ್ತದೆಯೋ ಅಥವಾ ಆರೋಪಿಯ ಜಮೀನಿನಲ್ಲಿ ಆರೋಪಿಯ ಮನೆ ಇರುತ್ತದೆಯೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ತುಕ್ಕಾನಟ್ಟಿ ಗ್ರಾಮದ ಪಕ್ಕದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಮನೆ ಹಂಚಿನ ಮನೆ ಆಗಿರುತ್ತದೆಯೋ ಅಥವಾ ಆರ್ ಸಿಸಿ ಮನೆ ಆಗಿರುತ್ತದೆಯೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಂಚಿನ ಮನೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಮನೆಯ ಅಕ್ಕಪಕ್ಕದಲ್ಲಿ ಯಾರ್ಯಾರ ಮನೆ ಇರುತ್ತದೆ ಎಂಬುವುದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಈ ಪ್ರಕರಣದ

ಚೆಕ್ಕನ್ನು ಆರೋಪಿ ನನಗೆ ಕೊಡುತ್ತೇನೆ ಎಂದು ತಿಳಿಸಿದಾಗ ಮಾತ್ರ ನಾನು ಆರೋಪಿಯ ಮನೆಗೆ ಕೇವಲ ಒಂದು ಸಾರಿ ಮಾತ್ರ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

9) ಆರೋಪಿಯ ತಂದೆ ತಾಯಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಅದರಂತೆ ಆರೋಪಿಗೆ ಎಷ್ಟು ಜನ ಅಣ್ಣ ತಮ್ಮಂದಿರರು ಇರುತ್ತಾರೆ ಎಂಬುವುದು ಸಹ ನನಗೆ ಗೊತ್ತಿರುವುದಿಲ್ಲ. ಆರೋಪಿ ನನ್ನ ಸ್ನೇಹಿತನಾಗಿರುವುದಿಲ್ಲ ಎಂದರೆ ಸರಿಯಲ್ಲ, ಆರೋಪಿ ನನ್ನಿಂದ ದೂರಿನಲ್ಲಿ ತಿಳಿಸಿದಂತೆ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಈ ಪ್ರಕರಣದ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಭದ್ರತೆಗಾಗಿ ತಮ್ಮಣ್ಣಗೌಡಾ ಪಾಟೀಲರವರಿಗೆ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ತಮ್ಮಣ್ಣಗೌಡಾ ಪಾಟೀಲರವರು ನನ್ನ ಮೂಲಕ ಆರೋಪಿಯ ವಿರುದ್ಧ ಇದೊಂದು ಸುಳ್ಳು ಕೇಸು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಹಾಗೂ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನಿಜವಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.